ತುರುಬು ಬಿಚ್ಚಿ ಬಾಯಲ್ಲಿ ತುರುಕಿದಳು. 'ಹುಂ' ಎಂದು ತಲೆ ಅಲ್ಲಾಡಿಸುತ್ತ ಬಸುರಿ ಮುಂದೆ ಬಾಗುತ್ತಿದ್ದಂತೆ 'ಟ್ಯಾಂ' ಎನ್ನುತ್ತ ಗಂಡುಕೂಸು ನೆಲದ ಮೇಲೆ ಬಿದ್ದಿತು. ಕೂಸಿನ ಹುರಿ ಕೊಯ್ದು, ದೇವರ ಮುಂದೆ ದೀಪ ಹಚ್ಚಲು ಹೇಳಿ ಮನೆಗೆ ಬಂದಳು. ಅಂದಿನಿಂದ ದಾನಮ್ಮತ್ತಿ ಹೆಸರಿಗೆ "ಸೂಲಗಿತ್ತಿ" ಎಂಬ ಅಭಿದಾನವೂ ಸೇರಿಕೊಂಡಿತು.

ಮೀಸೆಯ ಕಾರಣದಿಂದಾಗಿ ಅತ್ತೆಯ ಲಗ್ನವಾಗದೆ ಉಳಿದಾಗ ಬಹಳ ಜನ ಮರುಗಿದ್ದರು. ಒಂದು ಹೆಣ್ಣಿನ ಜೀವನ ಹಾಳಾಯಿತು, ಇನ್ನು ಅವಳದೇನಿದ್ದರೂ ತವರುಮನೆಯಲ್ಲಿ ಚಾಕರಿ ಮಾಡಿಕೊಂಡು ತಮ್ಮಂದಿರು ಹೇಳಿದಂತೆ ಕೇಳಿಕೊಂಡು ಹೋಗುವ ನಾಯಿ ಪಾಡು ಅವಳದಾಯಿತು ಎಂದುಕೊಂಡಿದ್ದರು. ಆದರೆ ದಾನಮ್ಮತ್ತಿ ಜಾಣೆ. ತನ್ನ ಬದುಕನ್ನು ಎಷ್ಟು ಚಂದಾಗಿ ರೂಪಿಸಿಕೊಂಡಳು! ತವರು ಮನೆಗೆ, ಊರಿಗೆ, ಸುತ್ತು ಹತ್ತು ಹಳ್ಳಿಗಳಿಗೂ ಪರಿಚಿತಳು.

ತನ್ನ ನಿಸ್ವಾರ್ಥ ಸೇವೆಯಿಂದ ಬಡವರು, ಬಲ್ಲಿದರೆನ್ನದೆ ಕೈಲಾದ ಸೇವೆ ಸಲ್ಲಿಸುತ್ತ ನಮ್ಮ ಭಾಗದಲ್ಲಿ ಬೇಕಾದವಳಾಗಿದ್ದಳು. ತಾನು, ತನ್ನಿಂದಾಯಿತು ಎಂಬ ಭಾವ ತಾಳದೆ ಎಲ್ಲವನ್ನೂ ಊರ ದೇವರಿಗೆ ಸಮರ್ಪಿಸುತ್ತಿದ್ದಳು. ಮನುಷ್ಯ ರೂಪದಲ್ಲಿ ಭೂಮಿಗೆ ಬಂದ ದೇವತೆ ಎಂದು ಜನರು ನಂಬಿದ್ದರು. ಎಂಥ ಸೇವೆ ಮಾಡಿದರೂ ಪ್ರತಿಫಲಾಪೇಕ್ಷೆ ಮಾಡದವಳ ಋಣದಲ್ಲಿ ಜನರಿದ್ದರು. ಅವಳ ಋಣ ತೀರಿಸುವ ದಾರಿ ತೋಚದೆ ಮನೆಯಲ್ಲಿ ಹುಟ್ಟಿದ ಹೆಣ್ಣು ಕೂಸಿಗೆ, 'ದಾನವ್ವ, ದಾಣಮ್ಮ, ದಾನಶ್ರೀ' ಹೆಸರಿಟ್ಟರೆ, ಗಂಡು ಕೂಸಿಗೆ 'ದಾನಪ್ಪ. ದಾನಣ್ಣ, ದಾನೇಶ' ಹೆಸರಿಡುತ್ತಿದ್ದರು. ಹೀಗಾಗಿ ನಮ್ಮ ಭಾಗದಲ್ಲಿ ಈ ಹೆಸರಿನವರೇ ತುಂಬಿ ತುಳುಕುತ್ತಿದ್ದಾರೆ. ಪೇಪರಿನವರು ಇವಳ ಬದುಕು, ನಿಸ್ವಾರ್ಥ ಸಾಧನೆ ಬಗ್ಗೆ ಸಚಿತ್ರ ಲೇಖನ ಪ್ರಕಟಿಸಿದರು. ಬೆಂಗಳೂರಿಂದ ಟೀವಿಯವರು ಅವಳ ಬಗ್ಗೆ ಪ್ರಸಾರ ಮಾಡಿದರು. ಗ್ರಾಮ ಪಂಚಾಯ್ತಿಯವರು ಠರಾವು ಮಾಡಿ ರಾಜ್ಯೋತ್ಸವ ಪ್ರಶಸ್ತಿಗಾಗಿ ಜಿಲ್ಲಾಡಳಿತಕ್ಕೆ ಬರೆದರು. ಹೀಗಾಗಿ ನಮ್ಮೂರು ನಮ್ಮ ಭಾಗಕ್ಕಷ್ಟೆ ಅಲ್ಲದೆ ಇಡೀ ಕರ್ನಾಟಕದ ತುಂಬ, ಕನ್ನಡ ಚಾನೆಲ್ ನೋಡುವ ವಿದೇಶದಲ್ಲಿರುವ ಕನ್ನಡಿಗರಲ್ಲೂ ಅತ್ತೆ ಫೇಮಸ್ಸು ಆದಳು. ರಾಜ್ಯೋತ್ಸವದಂದು ಜಿಲ್ಲಾಡಳಿತದವರು ಪ್ರಶಸ್ತಿ, ಫಲಕ ನೀಡಿ ಸನ್ಮಾನಿಸಿದರು. ಸ್ವತಃ ಜಿಲ್ಲಾ ಉಸ್ತವಾರಿ ಸಚಿವರೆ ತಮ್ಮ ಭಾಷಣದಲ್ಲಿ ಅವಳನ್ನು ಕೊಂಡಾಡಿ, ಸನ್ಮಾನಿಸಿ, ಪಾದ ಮುಟ್ಟಿ ನಮಸ್ಕರಿಸಿದಾಗ ಜಿಲ್ಲಾ ಕ್ರೀಡಾಂಗಣದ ತುಂಬ ಮಿಂಚಿನ ಸಂಚಾರವಾಗಿ ಚಪ್ಪಾಳೆಗಳ ಸುರಿಮಳೆಯಾಗಿತ್ತು. ಸಾಯಂಕಾಲ ಊರಿಗೆ ಬರುತ್ತಿದ್ದಂತೆ ಟ್ರಾಕ್ಟರನಲ್ಲಿ ಕಟ್ಟಿದ ಡೊಳ್ಳಾರಿ ಮೇಲೆ ಕೂಡ್ರಿಸಿ, ಬ್ಯಾಂಡು, ಡೊಳ್ಳು, ಹಲಗೆ ಮೇಳಗಳೊಂದಿಗೆ, ಮಕ್ಕಳು ಯುವಕರ ಕುಣಿತದೊಂದಿಗೆ, ಸಿಡಿವ ಪಟಾಕಿ, ಬಾಣ ಬಿರುಸುಗಳೊಂದಿಗೆ, ಊರ ತುಂಬ ಮೆರವಣಿಗೆ ಮಾಡಿ ಮನೆ ತಲುಪುವುದರೊಳಗಾಗಿ ಸರಹೊತ್ತು ಸಮೀಪಿಸಿತ್ತು. ಅವಳಿಗೆ ಆರತಿ ಎತ್ತಿದ ಕೈಗಳು, ಪಾದಕ್ಕೆ ನಮಿಸಿದ ಹಣೆಗಳು, ಕುಣಿದು ಕುಪ್ಪಳಿಸಿದ ಕೈಕಾಲುಗಳು, ಜಯಘೋಷ ಕೂಗಿದ ಬಾಯಿಗಳು ಧನ್ಯತೆಯ ಭಾವದಿಂದ ಸಂತೃಪ್ತಗೊಂಡಿದ್ದವು.

## ವೀರಭದ್ರ ಕೌದಿ

ಮೂಲತಃ ಬೆಳಗಾವಿ ಜಿಲ್ಲೆ ಬೈಲಹೊಂಗಲ ತಾಲ್ಲೂಕಿನ ದೊಡ್ಡವಾಡ ಗ್ರಾಮದವರು. ತಾಳಿಕೋಟಿ(ವಿಜಯಪುರ ಜಿಲ್ಲೆ)ಯ ಶ್ರೀ ಖಾಸ್ಗತೇಶ ಕಲಾ ಮತ್ತು ವಾಣಿಜ್ಯ ಮಹಾವಿದ್ಯಾಲಯದಲ್ಲಿ ಇಂಗ್ಲಿಷ ಪ್ರಾಧ್ಯಾಪಕರಾಗಿ ಸೇವೆ ಸಲ್ಲಿಸಿ ನಿವೃತ್ತರು. ಪ್ರಸ್ತುತ ಬೈಲಹೊಂಗಲದಲ್ಲಿ ನೆಲೆಸಿದ್ದಾರೆ.

ಕವಿತೆ, ನಾಟಕ, ಚುಟಕ, ಸಣ್ಣಕತೆಗಳನ್ನು ಬರೆದಿದ್ದಾರೆ. 'ಬರ ಮತ್ತು ಹತ್ತು ಕಥೆಗಳು' ಹಾಗೂ 'ಒಂದು ಹೆಣದ ಸುತ್ತಮುತ್ತ' ಅವರ ಪ್ರಮುಖ ಕಥಾಸಂಕಲನಗಳು.